


# ಹೆಚ್ಚು ದೂರದವರೆಗೆ ಮತ್ತು ಬಹಳ ಶೀಘ್ರ ಕೂಡ!



ಜಾನ್ ಮ್ಯಾಕ್ಲಿ
ಚಿತ್ರಃ  ಲಿಓನಾರ್ಡ ಕೆಸ್ಲರ್




# ಹೆಚ್ಚು ದೂರದವರೆಗೆ
# ಮತ್ತು ಬಹಳ ಶೀಘ್ರ ಕೂಡ!


ಜಾನ್ ಮ್ಯಾಕ್ಲಿ


ಚಿತ್ರಃ ಲಿಓನಾರ್ಡ ಕೆಸ್ಲರ್

ಕನ್ನಡಕ್ಕೆ ಪ್ರಭಾಕರ ನಾನಾವಟಿ







ಬಹಳ ವರುಷಗಳ ಹಿಂದೆ – ಎಷ್ಟು ವರುಷಗಳೋ ಎಂಬುದು ಗೊತ್ತಿಲ್ಲ – ಎಲ್ಲಿಗೆ ಹೋಗಬೇಕಾದರೂ ಕಾಲು ನಡಿಗೆಯಿಂದಲೇ ಹೋಗಬೇಕಾಗುತ್ತಿತ್ತು. ಆಗ ಕಾರುಗಳಾಗಲಿ, ಹಡಗುಗಳಾಗಲಿ, ವಿಮಾನಗಳಾಗಲಿ, ಸಾಯಕಲ್ಲುಗಳಾಗಲಿ ಯಾವ ವಾಹನಗಳು ಇರಲಿಲ್ಲ. ಎಲ್ಲರಿಗೂ ಎಲ್ಲಿಯಾದರೂ ಹೋಗಬೇಕಾದರೆ ನಡೆದುಕೊಂಡೇ ಹೋಗಬೇಕು. ನೀರಡಿಕೆಯಾದರೆ ನೀರಿದ್ದ ಬಾವಿಗೆ ಇಲ್ಲವೆ ಹಳ್ಳಕ್ಕೆ ಹೋಗಬೇಕು. ಬಹಳ ಚಳಿಯಾಗುತ್ತಿದ್ದರೆ ಕಟ್ಟಿಗೆಗಳಿದ್ದಲ್ಲಿ  ನಡೆದುಕೊಂಡು ಹೋಗಿ ಬೆಂಕಿ ಮಾಡಬೇಕು.  ಹಸಿವೆಯಾದರೆ...



...ಓಡುತ್ತ ಹೋಗಿ ಓಡುವ ಪ್ರಾಣಿಯ ಬೆನ್ನು ಬಿಡದೆ
ಬೇಟೆಯಾಡಬೇಕು. ಇಲ್ಲದಿದ್ದರೆ....



...ಆ ಕಾಡು ಪ್ರಾಣಿಯೇ ನಿಮ್ಮನ್ನು ತಿಂದುಬಿಡಬಹುದು. ಆ ಪ್ರಾಣಿಯೇ ನಿಮ್ಮ ಬೇಟೆಯಾಡಬಹುದು.

ಆ ಪ್ರಾಣಿಯನ್ನು ಕೊಂದ ಮೇಲೆ ಕೂಡ ಅದನ್ನು ನೀವಿರುವ ತಾಣದಲ್ಲಿ ತರಬೇಕಾದರೆ ಮತ್ತೇ ನಡೆಯಲೇ ಬೇಕು. ಆಗ ಅಲ್ಲಿ ಯಾವ ವಾಹನಗಳಿರಲಿಲ್ಲ. ನಡೆಯುವದು-ನಡೆಯುವದು ಇದೇ ನಿಮ್ಮ ಜೀವನವಾಗಿತ್ತು. ನಿಮಗೆಲ್ಲಿಯೋ ದೂರ ಹೋಗಬೇಕಾದರೆ ಎಷ್ಟೊಂದು ನಡೆಯಬೇಕಾಗಿರಬಹುದು, ಇದರ ಕಲ್ಪನೆಯನ್ನೇ ಮಾಡಲು ಶಕ್ಯವಾಗಲಾರದು.






ಆ ಪ್ರಾಚೀನ ಕಾಲದಲ್ಲಿಯ ಒಂದು ದಿನ ಯಾವನಿಗೋ ಒಬ್ಬನಿಗೆ ಒಂದು ಹೊಸ ಕಲ್ಪನೆ ಹೊಳೆದಿರಲು ಸಾಕು ಆತ ಅಡವಿಯಲ್ಲಿಯ ಪ್ರಾಣಿಗಳನ್ನು ಕಂಡಿರಬಹುದು. “ನೋಡಲ್ಲಿ. ಅದಕ್ಕೆ ಬಹುಗಟ್ಟಿಯಾದ ಬೆನ್ನಿದೆ. ನನಗಿಂತ ಹೆಚ್ಚು ಸಶಕ್ತ ಕಾಲುಗಳಿವೆ. ಅದಕ್ಕೆ ಭಾರ ಹೊರಲು ಕಲಿಸಿದರೆ ನನಗೆ ನಡೆಯುವ ಕಾರಣವಿಲ್ಲ. ಇದನ್ನೊಮ್ಮೆ ಮಾಡಿ ನೋಡುವ.” ಎಂದು ಆತನು ಯೋಚಿಸಿರಬಹುದು.



ಆ ಯೋಚನೆ ಬಹು ಅಪಾಯಕಾರಿ. ಆದರೂ ಜನ ಪ್ರಯತ್ನಿಸಿತು. ಅವರು ಚಿಕ್ಕ ಪ್ರಾಣಿಗಳನ್ನು ಹಿಡಿದು ಪ್ರಯತ್ನಿಸಿದರು.... ಆ ಮೇಲೆ ದೊಡ್ಡ ಪ್ರಾಣಿಗಳನ್ನು ಹಿಡಿದು...




ಕೆಲವು ತುಂಬಾ ವೇಗದಿಂದ. ಕೆಲವು ತುಂಬಾ ದುರ್ಬಲ.




ಮತ್ತು ಇನ್ನು ಕೆಲವು ಕೆಲಸ ಮಾಡಲು ಅಲ್ಲಗಳೆದವು.




ಆದಾಗ್ಯೂ, ಕೊನೆಗೂ ಅವರು ಪಳಗಿಸಲು ಮತ್ತು ತರಬೇತಿ ನೀಡಲು ಸಾಧ್ಯವಾಗುವ ಪ್ರಾಣಿಗಳನ್ನು ಕಂಡುಕೊಂಡರು - ಸುರಕ್ಷಿತ, ನಿಧಾನ ಪ್ರಾಣಿಗಳು. ಇದು ಮೊದಲಿನ ಸ್ಥಿತಿಗಿಂತ ಉತ್ತಮವಾಗಿತ್ತು .ಈಗ ನೀವು ಪ್ರಾಣಿಗಳ ಬೆನ್ನಿನ ಮೇಲೆ ಹೊರೆಯನ್ನು ಹೇರಿ ನೀವು ನಿಮ್ಮ ತೋಳುಗಳನ್ನು ತೂಗಾಡುತ್ತಾ ನಡೆಯಬಹುದು .ಅಷ್ಟೇ ಅಲ್ಲ - ನೀವು ಪರ್ವತಗಳನ್ನು ದಾಟಿ ಹೊಸ ಬೇಟೆಯಾಡುವ ಸ್ಥಳಗಳಿಗೆ ಹೆಚ್ಚು ದೂರ ಪ್ರಯಾಣಿಸಬಹುದು.



ಜನರು ತಮ್ಮ ಪ್ರಾಣಿಗಳೊಂದಿಗೆ ದೂರ, ದೂರ ಚಲಿಸಲು ಪ್ರಾರಂಭಿಸಿದಾಗ, ಪ್ರಾಣಿಗಳು ತುಂಬಾ ನಿಧಾನವಾಗಿ ಹೋಗುತ್ತಿವೆ ಎಂದೆನ್ನಿಸತೊಡಗಿತು.







ಸಾಕಷ್ಟು ಜನರು ತಾವು ಒಗ್ಗಿಕೊಂಡಿರುವ ಸುರಕ್ಷಿತ, ನಿಧಾನಗತಿಯ ಪ್ರಾಣಿಗಳ ಜೊತೆಗೆ ಪ್ರಯಾಣ ಮಾಡುವದರಲ್ಲಿ ತೃಪ್ತರಾಗಿದ್ದರು. ಆದರೆ ಕೆಲವು ಸಾಹಸಿಗಳು ಮಾತ್ರ ಒಂದರ ನಂತರ ಒಂದರಂತೆ ಇನ್ನುಳಿದ ಪ್ರಾಣಿಗಳನ್ನು ಪಳಗಿಸಲು ಪ್ರಯತ್ನಿಸುತ್ತಲೇ ಇದ್ದರು - ಕೊನೆಗೆ ಅವರು ವೇಗವಾದ ಮತ್ತು ಬಲವಾದ ಮಾತ್ರವಲ್ಲದೆ ಸೌಮ್ಯವಿರುವ ಪ್ರಾಣಿ ಕಂಡುಕೊಳ್ಳುವ ಒರೆಗೂ ಪ್ರಯತ್ನಿಸಿದರು.

THE HORSE.....

ಆಗ ಅವರಿಗೆ **ಕುದುರೆ** ದೊರೆಯಿತು



ಈಗ ಎಲ್ಲರಿಗೂ ಕುದುರೆಗಳು ಬೇಕಾದವು. ಕುದುರೆಗಳಿಲ್ಲದೆ ಅವರು ಇಲ್ಲಿಯವರೆಗೆ ಹೇಗೆ ಬದುಕುತ್ತಿದ್ದರು ಎಂದು ಅವರಿಗೆ ಊಹಿಸಲೂ ಸಾಧ್ಯವಾಗಲಿಲ್ಲ ...ಅಥವಾ ಇದಕ್ಕಿಂತ ಉಳಿದ ಯಾವದೇ ಪ್ರಾಣಿ ಉತ್ತಮವಾಗಿರುತ್ತದೆ ಎಂದು ಅವರು ನಂಬಲೂ ಸಾಧ್ಯವಾಗಲಿಲ್ಲ .ಇದೇ ಅವರಿಗಾಗಿ ಅತ್ಯುತ್ತಮವಾಗಿತ್ತು.



ಈ ಕಾಲದಲ್ಲಿ  ಭೂಮಿಯ ಮೇಲೆ ಪ್ರಯಾಣಿಸುವ ಜನರು ಮಾತ್ರವಲ್ಲದೆ ಹರಿಯುವ ನೀರಿನ ಅಕ್ಕ ಪಕ್ಕದಲ್ಲಿ ವಾಸಿಸುವ ಜನರು ಕೂಡ ಇದ್ದರು .ನೀರಿನ ಬಳಿ ವಾಸಿಸದಿದ್ದರೂ ಸಹ,  ದೂರದ ಪ್ರಯಾಣವನ್ನು ಪ್ರಾರಂಭಿಸಿದಾಗ ದಾರಿಯಲ್ಲಿ ನದಿ  ಅಥವಾ ಹರಿಯುವ ನೀರನ್ನು ದಾಟುವ ಪ್ರಸಂಗಗಳು ಬರುತ್ತಲೇ ಇದ್ದವು. ನದಿಗಳು ಜನರನ್ನು ಇನ್ನೊಂದು ಬದಿಗೆ ಹೋಗದಂತೆ ತಡೆಯುತ್ತಿದ್ದವು .


ಆಗ ಅವರಿಗೆ ದಿಮ್ಮಿಗಳು  ಕಂಡವು. ಅವರು ನದಿಯಲ್ಲಿ ತೇಲುತ್ತಿರುವ ದಿಮ್ಮಿಗಳನ್ನು ನೋಡಿದರು .ಅವರಲ್ಲಿಯ ಕೆಲವರಿಗೆ ಈ ದಿಮ್ಮಿಗಳನ್ನು ಕಂಡು  ಒಂದು ಕಲ್ಪನೆ   ಹೊಳೆದಿರಬೇಕು. "ಆ ದಿಮ್ಮಿಗೆ  ತೇಲಲು ಸಾಧ್ಯವಾಗುತ್ತಿದ್ದರೆ, ನಾವು ಆ ದಿಮ್ಮಿಯ ಮೇಲೆನಿಂತು  ಏಕೆ ತೇಲಲು ಸಾಧ್ಯವಿಲ್ಲ?"



ಬರಿ ಯೋಚಿಸುತ್ತ ಕುಳಿತರೆ ಮರದ ದಿಮ್ಮಿಗಳ ಮೇಲೆ ಕುಳಿತು ಬಹಳ ಹೊತ್ತು ತೇಲುತ್ತಾ ದಿಮ್ಮಿ ಹೋದ ದಿಟ್ಟಿಗೆ ಹೋಗಲು ಸಾಧ್ಯವಿಲ್ಲ, ಅಲ್ಲವೇ? ಆಗ ಅವುಗಳಿಗೆ ಸರಿಯಾದ ದಿಕ್ಕಿನಲ್ಲಿ ಚಲಿಸಲು ಮತ್ತು ಪ್ರವಾಹದ ಮೇಲೆ ಹೋಗಲು ಹುಟ್ಟುಗಳು ಬೇಕಾಗುತ್ತವೆ .ಏನನ್ನಾದರೂ ಆವಿಷ್ಕರಿಸಬೇಕಾದಾಗ, ಯಾರಾದರೂ ಸಾಮಾನ್ಯವಾಗಿ ಅದನ್ನು ಆವಿಷ್ಕರಿಸುತ್ತಾರೆ .

ನಿದಾನವಾಗಿ ಒಂದಾದ ಮೇಲೆ ಒಂದರಂತೆ ಈ ಶೋಧ ನಡೆಯುತ್ತದೆ. ಪ್ರಯೋಗ ಮಾಡಿದಾಗ ಈ ತೇಲುವ ಕ್ರಿಯೆಗೆ ದಿಮ್ಮಿಗಳು, ಕೋಲುಗಳು, ಪ್ಯಾಡಲ್‌ಗಳು ಮತ್ತು ಹುಟ್ಟುಗಳು ಬೇಕು ಎಂಬುದನ್ನು ಅವರು ಕಂಡು ಹಿಡಿದರು. ಇವುಗಳಿಂದಲೇ ತೇಲುವ ದೋಣಿಯ ಕಲ್ಪನೆ ಮೂಡತೊಡಗಿತು. ತಾವು ಯೋಚಿಸಿದ ಕಲ್ಪನೆಗಳನ್ನು ಉಳಿದವರಿಗೆ ಹೇಳಿದರು. ಅವರ ಕಲ್ಪನೆಗಳನ್ನು ಕೇಳಿಕೊಂಡರು. ಹೊಸ ಕಲ್ಪನೆಗಳು ಕೂಡ ಹಳೆಯದಾಗಿ ಕಾಣತೊಡಗಿದವು.






ಇವುಗಳಲ್ಲಿ ನೀರಿನ ಮೇಲೆ ತೇಲುವ ತೆಪ್ಪ, ತೇಲೊಡ್ಡು ಇಲ್ಲವೆ ನೌಕೆ, ದೋಣಿಯ ಕಲ್ಪನೆ ಮುಂದಿನ ಪೀಳಿಗೆಗೆ ಹಿಡಿಸಿತು. ಈ ಕಲ್ಪನೆಯ ಮೇಲೆ ಜನ ವಿಚಾರ ಮಾಡತೊಡಗಿತು. "ದೋಣಿ ಇಷ್ಟೊಂದು ಜನರನ್ನು ಇಷ್ಟು ಹರಿಯವ ನದಿಗಳ, ಸರೋವರಗಳ ನೀರಿನಲ್ಲಿಂದ ಸುರಕ್ಷಿತವಾಗಿ ರಭಸದಿಂದ ಹೋಗುತ್ತಿದ್ದರೆ ಭೂಮಿಯ ಮೇಲೆ ಕುದುರೆಗಳು ಜಗ್ಗುವ ದೋಣಿಯನ್ನು ನಾವೇಕೆ ಮಾಡಬಾರದು? ಭಾರವನ್ನು ಹೊರುವದಕ್ಕಿಂತ ಜಗ್ಗುವದು ಬಹು ಸುಲಭ. " ಈ ಕಲ್ಪನೆಯನ್ನು ಪ್ರತ್ಯಕ್ಷವಾಗಿ ಪ್ರಯೋಗಿಸತೊಡಗಿದರು. ಪಾಪ, ಇದಕ್ಕಾಗಿ ಕುದುರೆಗಳ ಕೊರಳುಗಳನ್ನು ಹಿಸುಕಿದಾಗ ಅವು ತೆತ್ತರಿಸಿ ಬೀಳತೊಡಗಿದವು.



ಆದರೂ ಈ ಕಲ್ಪನೆ ಸರಿಯಾದ ಕಲ್ಪನೆಯಾಗಿತ್ತು. ಕುದುರೆಗಳ ಕೊರಳಿಗೆ ಅಪಾಯವಾಗಬಾರದೆಂದು ಏನಾದರೂ ಮಾಡಲೆ ಬೇಕು. ಅದಕ್ಕಾಗಿ ಕುದುರೆಯ ಕೊರಳಿನ ಸುತ್ತಲು ಕಟ್ಟಲು ಕಾಲರ್ ದ (ಕೊರಳುಪಟ್ಟಿಯ) ಶೋಧವಾಯಿತು.




ಕಾಲರಿನಿಂದಾಗಿ ಕೊರಳಿಗೆ ನೋವು ಉಂಟು ಮಾಡದೆ ಕುದುರೆ ಹೆಚ್ಚು ಭಾರವನ್ನು ಒಯ್ಯತೊಡಗಿತು. ದೋಣಿಯ ಹಾಗೆ ಇದು ಕೂಡ ಎಂದು ಮನವರಿಕೆಯಾಯಿತು. ಇದಕ್ಕಿಂತ ಸರಿಯಾದದ್ದು ಯಾವದಿರಬಹುದು?





ಆದರೆ ಕೆಲ ಜನರು ಇದಕ್ಕಿಂತ ಚೆನ್ನಾಗಿ ಏನಾದರು ಇದೆಯೇ ಎಂಬುದರ ಬಗ್ಗೆ ಯೋಚಿಸುತ್ತಿರಬಹುದು.. ಇವರಲ್ಲಿಯ ಒಬ್ಬಿಬ್ಬರು ಗುಡ್ಡದ ಮೇಲಿನಿಂದ ಕಲ್ಲುಬಂಡೆಗಳು ಉರುಳುತ್ತ ಕೆಳಗೆ ಬರುತ್ತಿದ್ದದ್ದನ್ನು ಕಂಡಿರಬಹುದು. ಅವರ ತಲೆಯಲ್ಲಿ ಇದರ ಬಗ್ಗೆ ವಿಚಾರ ಮೂಡಿರಬಹುದು. ಮರಗಳ ಕೊರಡನ್ನು ಬರಿ ನೂಕುತ್ತ ಕೆಳಗೆ ಬರುವದಕ್ಕಿಂತ  ಅದನ್ನು ಉರುಳಿಸುತ್ತ ಬಂದರೆ ಬಲವು ಕಡಿಮೆ ಹೆಚ್ಚಬಹುದು ಮತ್ತು ಬೇಗನೆ ಕೆಳ ಬರಬಹುದು ಎಂದೆನ್ನಿಸಿತು. ಆದರೆ ಅದು ದುಂಡಗೆ ಇರಬೇಕು. ದುಂಡಗೆ..ದುಂಡಗೆ...ಉರುಳಿಸಲು ಸುಲಭ...ದುಂಡಗೆ...

ಅವರು ಏನೆಂದು ವಿಚಾರ ಮಾಡಿರಬಹುದು ಎಂಬುದನ್ನು ಊಹಿಸಲು ಸಾಧ್ಯವೇ?


THE WHEEL!
ಗಾಲಿಗಳು!

ಗಾಲಿಯ ಉಪಯೋಗ ಬಹಳ ಕಡೆಗೆ ಮಾಡಬಹುದು. ಇದಕ್ಕಿರುವ ಒಂದೇ ತೊಂದರೆ ಎಂದರೆ ಅದು ತಗ್ಗು-ದಿನ್ನೆಗಳಿರುವ ದಾರಿಯಲ್ಲಿ ಸುಲಭವಾಗಿ ಹೋಗಲಾರದು. ಆದರೆ ಕುದುರೆಗಳು ಇಂತಹ ಅಂಕು-ಡೊಂಕಾದ ಏರು-ಇಳಿವುಗಳಿರುವ ನೆಲದ ಮೇಲೆ ಕೂಡ ಹೋಗಬಹುದು. ಗಾಲಿಗಳನ್ನು ಸರಿಯಾಗಿ ಉಪಯೋಗಿಸಲು ದಾರಿಯ ಮೇಲಿನ ತಗ್ಗು ದಿನ್ನೆಗಳನ್ನು ಸರಿಪಡಿಸಿ ನಯವಾದ ದಾರಿ ಮಾಡಬೇಕು. ಎಲ್ಲ ಕಲ್ಲುಗಳನ್ನು ನೆಲಸಮ ಮಾಡಬೇಕು, ತಗ್ಗುಗಳನ್ನೆಲ್ಲ ಮುಚ್ಚಬೇಕು.

ಇದರ ಶೋಧ....






# . . . . . ROADS


## ......ದಾರಿಗಳು!

ಇದೆಲ್ಲ ಮಾಡಲು ಯಾವನೋ ಒಬ್ಬನು ದಾರಿಗಳನ್ನು ಹೇಗೆ ಮಾಡಬೇಕು ಎಂಬುದನ್ನು ಕಂಡು ಹಿಡಿದನು.



ನಿಜವಾಗಿ ನೋಡಿದರೆ ದೋಣಿಗಳನ್ನು ನಡೆಸುವದಕ್ಕಾಗಿ  ನೀರಿನ ಮೇಲೆ ಪ್ಯಾಡ್ಲಿಂಗ್ ಮಾಡುವವರಿಗೆ ಆರಂಭದಲ್ಲಿ ಸಾಕಷ್ಟು ಸುಗಮವಾದ ಏರು-ಇಳಿವುಗಳಿರದ ರಸ್ತೆ ದೊರೆತಿತ್ತು. ಅವರು ಬೆಟ್ಟದ ಮೇಲೆ ಮತ್ತು ಕೆಳಗೆ ಸಾಲಾಗಿ ಹೋಗಬೇಕಾಗಿಲ್ಲ. ಆದರೂ ಅವರು ದೋಣಿ ನಡೆಸುವದು ಕಠಿಣ ಕೆಲಸವಾಗಿತ್ತು. ಅವರು ದೋಣಿ ನಡೆಸುವುದರಲ್ಲಿ ಸಾಕಷ್ಟು ಸಮಯವನ್ನು ಕಳೆದಿರಬೇಕು, ಮತ್ತು ದೋಣಿ ನಡೆಸುವಾಗ ಅವರು ಯೋಚಿಸಿರಬೇಕು. ಬಹುಶಃ ಇದು ಯಾರನ್ನಾದರೂ ಯೋಚಿಸುವಂತೆ ಮಾಡಿತು: "ಈ ಗಾಳಿ - ಇದು ಅನೇಕ ಪ್ಯಾಡ್ಲಿಂಗ್ ಮಾಡುವವರಿಗಿಂತ ಬಲಶಾಲಿಯಾಗಿದೆ - ನಾವು ಅದನ್ನು ಹೇಗೆ ಹಿಡಿಯಬಹುದು?" ಆದ್ದರಿಂದ ಅವರೆಲ್ಲರೂ ಇದರ ಬಗ್ಗೆ ಮಾತನಾಡಿದರು, ಯೋಚಿಸಿದರು ಮತ್ತು ಅವರು ದೋಣಿಯನ್ನು ಮುನ್ನಡೆಸಲು ಗಾಳಿಯನ್ನು ಹೇಗೆ ಉಪಯೋಗಿಸಬಹುದು ಇದರ ಬಗ್ಗೆ ಯೋಚಿಸತೊಡಗಿದರು ಮತ್ತು ಪ್ರಯತ್ನಿಸತೊಡಗಿದರು. ಗಾಳಿ ಇದ್ದ ದಿಕ್ಕಿನಲ್ಲಿ ದೋಣಿ ರಭಸದಿಂದ ಹೋಗುವದನ್ನು ಅವರು ಅನುಭವಿಸಿದರು. ಗಾಳಿಯ ಉಪಯೋಗ ಮಾಡಲು ದೋಣಿಗೆ ನೌಕಾಪಟ ಕಟ್ಟಿ ಅದರ ವೇಗ ಹೆಚ್ಚಿಸಿದರು. ದಿಕ್ಕು ಬದಲಿಸುವ ಬಗೆ ಕಂಡು ಹಿಡಿದರು.  ದೋಣಿಗಳೊಂದಿಗೆ ಜನರು ಸಮುದ್ರದಲ್ಲಿ ಮತ್ತು ಸಮುದ್ರದ ಆಚೆಗೆ ಹೋಗಿ ಇನ್ನೂವರೆಗೂ ಯಾರೂ ಕಾಲಿಡಲಾರದ  ಭೂಮಿಯನ್ನು ಹುಡುಕಿದರು.

ಆದರೆ ಎಲ್ಲಕ್ಕೂ ಒಂದು ಕೊನೆ ಇರುತ್ತದೆ. ಆಗ ಅವರು ಕೊನೆವರೆಗೆ ತಲುಪಿದರೆ  ನೀವು ಖಂಡಿತವಾಗಿಯೂ ಬೀಳುತ್ತಿರಿ ಎಂಬ ಅಂಜಿಕೆಯಲ್ಲಿ ಪ್ರವಾಸ ಮಾಡುತ್ತಿದ್ದರು. ಸಾವಿರಾರು ವರುಷಗಳಿಂದ ಜನರು ಭೂಮಿಯ ಅಂಚುಗಳ ಬಗ್ಗೆ ಚಿಂತಿಸುತ್ತಿದ್ದರು. ನಿಮಗೂ ತಿಳಿದಿದ್ದರೆ ನೀವು ಕೂಡ ಚಿಂತಿಸುತ್ತಿದ್ದಿರಿ.  ಇಂದು  ಭೂಮಿಗೆ ಅಂಚುಗಳಿಲ್ಲ ಮತ್ತು ಸಾಗರಕ್ಕೆ ಅಂತ್ಯವಿಲ್ಲಎಂಬುದು ತಿಳಿಯತೊಡಗಿದೆ. ಜನರು ಅಂತಹ ಅಂಜಿಕೆ ಬರುವ ಅಂತ್ಯವಿರದ ಸಾಗರಗಳನ್ನು ಸುತ್ತುವರೆದು ಪ್ರಪಂಚದಾದ್ಯಂತ ಪ್ರಯಾಣ ಮಾಡಿದ ದಾಖಲೆಗಳಿವೆ. ಇದರ ಮೇಲಿಂದ ಈ ಪೃಥ್ವಿ ಸಪಾಟಾಗಿರದೆ ಚೆಂಡಿನ ಆಕಾರದಂತೆ ದುಂಡಗಿದೆ ಎಂಬುದು ಖಚಿತವಾಯಿತು.










ಮೊದಲಿನ ಕಾಲದಿಂದಲೂ ಜನರಿಗೆ ನೆಲದ ಮತ್ತು ಸಮುದ್ರಗಳ ಮೇಲಿನ ಪ್ರಯಾಣ ಮಾಡುತ್ತಿದ್ದಾಗ ಕೆಲ ಜನರಿಗೆ ಆಕಾಶದಲ್ಲಿ ಹಾರಾಡುವ ಪಕ್ಷಿಗಳನ್ನು ನೋಡಿ ನಾವು ಕೂಡ ಆ ಹಕ್ಕಿಗಳಂತೆ ಹಾರಾಡುವ ಕನಸುಗಳನ್ನು ಕಾಣುತ್ತಿದ್ದರು. ಅವರಿಗೆ ನೆಲದ ಮತ್ತು ಸಮುದ್ರಗಳ ಮೇಲಿನ ಬಹು ನಿದಾನವಾಗಿರುವ ಪ್ರವಾಸ ಅಷ್ಟೊಂದು ಸೇರಿರಲಿಲ್ಲ. ಅವರು ಸಮುದ್ರ, ಮಹಾಸಾಗರ ಮತ್ತು ಭೂಮಿಯ ಮೇಲಿನ ಎಲ್ಲಿಯೂ ನಿಲ್ಲದಂತೆ ಕುದುರೆಗಳಿಗಿಂತ ಸಮುದ್ರದಲ್ಲಿಯ ನೌಕೆಗಳಿಗಿಂತ –ಇಷ್ಟೇ ಏಕೆ, ಗಾಳಿಗಿಂತಲೂ - ಹೆಚ್ಚು ವೇಗದಿಂದ ಆಕಾಶದಲ್ಲಿ ಹಾರಾಡುತ್ತ ಹೋಗುವ ಕನಸುಗಳನ್ನು ಕಾಣುತ್ತಿದ್ದರು. ಉಳಿದ ಜನರು ಇದು ಅಸಾಧ್ಯ ಎಂದು ಅವರನ್ನು ಹೀಯಾಳಿಸುತ್ತಿದ್ದರು.


"ಆಕಾಶದಲ್ಲಿ ಹಾರುವದು ಅಶಕ್ಯ, " ಎಲ್ಲರು ಹೇಳುತ್ತಿದ್ದರು, "ನಮ್ಮ ಭಾರ ಸಾಕಷ್ಟಿದೆ. " ಕನಸನ್ನು ಕಾಣುವವರಿಗೂ ಕೂಡ ನಮ್ಮ ತೂಕ ಹೆಚ್ಚಿದೆ ಎಂಬುದು ತಿಳಿಯಿತು.







ನಾವು ಎಷ್ಟೋ ಶತಮಾನ ಇದೇ ರೀತಿಯಲ್ಲಿ ಯೋಚಿಸಿ ಕುದುರೆಗಳು ಜಗ್ಗುವ ಬಂಡಿಗಳಲ್ಲಿ, ಸಮುದ್ರದಲ್ಲಿಯ ಗಾಳಿ ನೂಕುವ ನೌಕೆಗಳಲ್ಲಿ ಪ್ರವಾಸ ಮಾಡುತ್ತ ತೆಪ್ಪಗೆ ಇದ್ದೆವು. ಆದರೂ ಕೆಲವರು ಹಕ್ಕಿಗಳಂತೆ ಆಕಾಶದಲ್ಲಿ ಹಾರಾಡುವ ಬಗ್ಗೆ ಯೋಚಿಸುತ್ತಲೇ ಇದ್ದರು. ಉಳಿದವರು ಮಾತ್ರ ಈಗ ಇರುವ ಪ್ರವಾಸದ ಸಾಧನಗಳ ಮೇಲೆ ಸಮಾಧಾನಪಟ್ಟು ಜೀವಿಸುತ್ತಿದ್ದರು. ಇನ್ನು ಮುಂದೆ ಯಾವ ಶೋಧಗಳು ಶಕ್ಯವಿಲ್ಲ ಎಂದು ನಿರ್ಧಸಿದರು.





ಒಂದು ರೀತಿಯಲ್ಲಿ ಅವರದೇ ಸರಿ ಎಂದೆನ್ನಿಸುತ್ತಿತ್ತು. ಮನುಷ್ಯರಲ್ಲಿ ಇರುವ, ಕುದುರೆಯಂತಹ ಪ್ರಾಣಿಗಳಲ್ಲಿರುವ ಸ್ನಾಯುಬಲದಿಂದ ಇಲ್ಲವೆ ಗಾಳಿಯ ಬಲದಿಂದ ಪ್ರವಾಸ ಮಾಡುತ್ತಲೇ ಇದ್ದರು.

ನಿಜವಾಗಿ ನೋಡಿದರೆ ಇಷ್ಟೊಂದು ವೇಗದಿಂದ ಹೋಗುವದರಲ್ಲಿ ಜನರಿಗೆ ಆಸಕ್ತಿ ಇರಲಿಲ್ಲ. ಎಷ್ಟೋ ಜನರು ಇನ್ನುಳಿದ ವಿಷಯಗಳಲ್ಲಿ ಸಂಶೋಧನೆ ಮಾಡುತ್ತಿದ್ದರು. ಕೆಲ ಜನರಿಗೆ ಬೆಂಕಿಯಲ್ಲಿ ಆಸಕ್ತಿ ಇತ್ತು. ಬೆಂಕಿಯಲ್ಲಿ ತಾವು ತಿನ್ನುವ ಆಹಾರ ಪದಾರ್ಥಗಳನ್ನು ಬೇಯಿಸುವದರಿಂದ ಅವುಗಳ ರುಚಿ ಹೆಚ್ಚುತ್ತದೆ, ಅವು ಮೆತ್ತಗಾಗುತ್ತವೆ, ಪಚನಕ್ಕೆ ಹಗುರಾಗುತ್ತವೆ ಎಂಬುದು ಅವರಿಗೆ ತಿಳಿಯತೊಡಗಿತು. ಬೆಂಕಿಯಿಂದಾಗಿ ನೀರು ಕುದಿಯುವದನ್ನು ಮತ್ತು ಉಗಿಯಾಗುತ್ತಿರುವದನ್ನು ಅವರು ಶೋಧಿಸಿದರು. ಎಷ್ಟೋ ಜನರು ಉಗಿಯಿಂದಾಗುವ ಪ್ರಯೋಜನಗಳ ಬಗ್ಗೆ ಯೋಚಿಸತೊಡಗಿದರು. ಉಗಿ ಹೊರಬಿದ್ದಾಗ ಅದರಲ್ಲಿ ಸಾಕಷ್ಟು ಬಲವಿರುತ್ತದೆ ಎಂಬುದು ಅವರಿಗೆ ತಿಳಿದು ಬಂತು. ಈ ಹೊರಬೀಳುವ ಉಗಿಯಿಂದ ಕೆಲಸ ಮಾಡುವ ಯಂತ್ರಗಳನ್ನು ಅವರು ಕಂಡು ಹಿಡಿದರು. ಅವರಲ್ಲಿಯ ಕೆಲವರಿಗೆ ಈ ಉಗಿಯಿಂದ ಪ್ರಯಾಣ ಮಾಡಬಹುದು ಎಂಬುದು ಹೊಳೆಯಿತು. ಅವರು ಈ ಉಗಿಯ ಬಲದಿಂದ ಗಾಲಿಯನ್ನು ರಭಸದಿಂದ ತಿರುಗಿಸುವ ಯಂತ್ರವನ್ನು ಶೋಧಿಸಿದರು. ಇದು ಒಂದು ಕ್ರಾಂತಿಕಾರಿ ಶೋಧವಾಗಿತ್ತು. ಉಗಿಯ ಬಲವನ್ನುಪಯೋಗಿಸಿ ಅದೆಷ್ಟೋ ಶೋಧಗಳು ಆ ಕಾಲದಲ್ಲಿ ಆದವು. ಈ ಬಲವನ್ನುಪಯೋಗಿಸಿ ಎಷ್ಟೋ ಸಾಧನಗಳನ್ನು ನಿರ್ಮಿಸಲಾಯಿತು.








ಕೆಲ ಜನರಿಗೆ ಉಗಿಯು ಗಾಲಿಗಳನ್ನು ಉರುಳಿಸಬಹುದು ಮತ್ತು ನೌಕೆಗಳಲ್ಲಿ ಪೆಡ್ಲಿಂಗ ಮಾಡಬಹುದು ಎಂಬುದು ಹೊಳೆಯಿತು.






ಇನ್ನು ಕೆಲವರಿಗೆ ಉಗಿಯು ಗಾಲಿಗಳನ್ನು ತಿರುಗಿಸುವ ಹಾಗೆ ಮಾಡಿದರೆ ಕುದುರೆ ಬಂಡಿಯಿಂದ ಭಾರವನ್ನು ಒಯ್ಯುವದಕ್ಕಿಂತ ಉಗಿಬಂಡಿಗಳಲ್ಲಿ ಭಾರವನ್ನು ಒಯ್ಯಬಹುದು ಎಂಬುದು ಹೊಳೆಯಿತು. ಹೀಗಾದರೆ ಕುದುರೆಗಳೇ ಬೇಕಿಲ್ಲ.



ಇದನ್ನೆಲ್ಲ ಕೆಲವರು ಪ್ರಯೋಗ ಮಾಡಿ ಕಂಡು ಹಿಡಿದರು. ಯಂತ್ರಗಳನ್ನು ಶೋಧಿಸಿ ದೊಡ್ಡ ಗಾತ್ರದ ಗಾಲಿಗಳನ್ನು ತಿರುಗಿಸುವದರಲ್ಲಿ ಅವರು ಯಶಸ್ವಿಯಾದರು. ಇದರಿಂದ ಉಂಟಾದ ಬಲವು ಹತ್ತು, ಇಪ್ಪತ್ತು, ಅರುವತ್ತು ಕುದುರೆಗಳ ಬಲಕ್ಕಿಂತ ಹೆಚ್ಚು ಇತ್ತು.





ಆದರೆ ಈ ಉಗಿಶಕ್ತಿಯಿಂದ ಚಲಿಸುವ ಈ ಇಂಜಿನುಗಳು ಅರವತ್ತು ಕುದುರೆಗಳಿಗಿಂತ ಹೆಚ್ಚು ಹೆದರಿಸುತ್ತಿದ್ದವು. ಅವು ಮಾಡುವ ಸಪ್ಪಳ, ಅವು ಹೊರಬೀಳಿಸುವ ಹೊಗೆ, ಮಸಿಗೆಂಡಗಳು ಬಹಳ ಅಪಾಯಕಾರಿಗಳಾಗಿದ್ದವು. ಸಂಶೋಧಕರಿಗೆ ತಾವು ಶೋಧಿಸಿದ ಇಂಜಿನುಗಳ ಬಗ್ಗೆ ಹೆಮ್ಮೆ ಇದ್ದರೂ ಸಾಕಷ್ಟು ಜನರಿಗೆ ಇಂತಹ ಉಗಿಬಂಡಿಗಳಲ್ಲಿ ಪ್ರವಾಸ ಮಾಡುವದು ಹಿಡಿಸುತ್ತಿರಲಿಲ್ಲ.

ಹಾಗೆ ನೋಡಿದರೆ ಕುದುರೆಯಿಂದ ಯಾವ ಅಪಾಯಗಳಿಲ್ಲ. ಅಷ್ಟೇ ಏಕೆ, ಅವುಗಳ ಮೇಲೆ ನಾವು ನಂಬಿಕೆ ಇಡಬಹುದು. ಆದರೆ ವರುಷಗಳು ಸರಿದಂತೆ ಜನರಿಗೆ ಉಗಿಯ ಮೇಲೆ ನಡೆಯುವ ನೌಕೆಗಳು ಮತ್ತು ಉಗಿಬಂಡಿಗಳಲ್ಲಿಯ ಪ್ರವಾಸ ಸೇರತೊಡಗಿತು. ಈ ಬಾಷ್ಪಶಕ್ತಿಯಿಂದ ರಭಸಾಗಿ ಓಡುವ ವಾಹನಗಳನ್ನು ಬಿಟ್ಟರೆ ಮತ್ತೇ ಯಾವ ವಾಹನಗಳು ಇಷ್ಟು ವೇಗದಿಂದ ಓಡಲಾರವು ಎಂಬುದರ ಬಗ್ಗೆ ಅವರ ದೃಢವಿಶ್ವಾಸವಿತ್ತು. ಅವರಲ್ಲಿಯ ಕೆಲ ಮೂಢ ಜನರಂತೂ ಇನ್ನು ಮುಂದೆ ಕೂಡ ಯಾರೂ ಇಂತಹದನ್ನು ಶೋಧಿಸಲಾರರು, ಎಂದು ನಂಬಿದ್ದರು.

ದೂರದ ಪ್ರಯಾಣಕ್ಕೆ ರೈಲುಗಳು ಬಹು ಅನುಕೂಲ.ಪಶ್ಚಿಮ ಪ್ರದೇಶದಲ್ಲಿಯ ಬೆಳೆಯನ್ನು ಪೂರ್ವದ ಪ್ರದೇಶಗಳಲ್ಲಿ ಮುಟ್ಟಿಸಲು ಇಲ್ಲವೆ ಪೂರ್ವದಲ್ಲಿಯ ಬೆಳೆಗಳನ್ನು ಪಶ್ಚಿಮದ ಪ್ರದೇಶಗಳಿಗೆ ತಲುಪಿಸಲು ರೈಲಿನಂತಹ ಮತ್ತೊಂದು ವಾಹನ ಸೌಕರ್ಯ ಇರಲಾರದು. ಆದರೆ ಇದು ಸಮೀಪದ ಹಳ್ಳಿಗಳಿಗೆ ರೈಲು ಸೌಕರ್ಯಗಳನ್ನು ನಿರ್ಮಿಸದಿದ್ದರೆ, ಬಿಡುವಿನ ದಿನಗಳಲ್ಲಿ ಸಮೀಪದಲ್ಲಿಯೇ ಎಲ್ಲಿಯಾದರು ಹೋಗಬೇಕಿದ್ದರೆ ರೈಲು ಪ್ರಯಾಣ ಬೇಸರ ತರುವದು. ನಿಮ್ಮ ವ್ಯವಸಾಯ ರೈಲು ನಿಲ್ದಾಣಗಳಿಂದ ದೂರವಿದ್ದರೆ ರೈಲಿನ ಉಪಯೋಗವಾಗಲಾರದು.



ಮತ್ತೇ ಜನರು ಇದರ ಬಗ್ಗೆ ಯೋಚಿಸತೊಡಗಿದರು. ಉಗಿಬಲದಂತೆ ಇಂಜಿನನ್ನು ನಡೆಸುವ ಇನ್ನೊಂದು ಬಗೆ ಇರಲೇಬೇಕು. ಆಗ ಅವರಿಗೆ ಪಟಾಕಿಯಲ್ಲಿರುವ ಮದ್ದುಗಳಂತೆ ಸ್ಫೋಟ ಮಾಡಿ ಬಲವನ್ನು ನಿರ್ಮಿಸುವ ಯೋಚನೆ ಹೊಳೆಯಿತು. ಏಕೆಂದರೆ ಪಟಾಕಿ ಹಾರಿಸುವಾಗ ಅದರ ಮೇಲಿಟ್ಟ ತಗಡಿನ ಡಬ್ಬಿಯು ಯಾರೋ ರಭಸದಂತೆ ನೂಕಿದಹಾಗೆ ದೂರ ಹೋಗಿ ಬೀಳುವದನ್ನು ಅವರು ನೀರಿಕ್ಷಿಸಿದ್ದರು.





"ಪೆಟ್ರೋಲದಂತಹ ಖನಿಜತೈಲದಿಂದಲೂ ಸ್ಫೋಟಗೊಳಿಸಬಹುದು. ಸಾಕಷ್ಟು ಪ್ರಮಾಣದಲ್ಲಿ ಬೆಂಕಿಯ ಕಿಡಿಗಳನ್ನು ಖನಿಜತೈಲಿನ ಹತ್ತಿರ ಸಾಕಷ್ಟು ಸಲ ತರಲು ಶಕ್ಯವಾದರೆ ಇಂಜಿನನ್ನು ನಡೆಸಲು ಸಾಧ್ಯವಾಗುವದು ಎಂದು ಕೆಲವರು ಯೋಚಿಸಿದರು. ಒಂದಿಷ್ಟು ಪ್ರಯೋಗ ಮಾಡಿದಾಗ ಫಟ್..ಫಟ್.. ಫಟ್ ಫಟ್ ಎಂದು ಸಪ್ಪಳ ಮಾಡುತ್ತ ಇಂಜಿನ್ ಭಾರವನ್ನು ಹೊರತೊಡಗಿತು.

ಇಂತಹ ಇಂಜಿನ್ ಸುತ್ತಲೂ ಹಾಯಾಗಿ ಕುಳಿತು ಕಾರಿನಲ್ಲಿ ಪ್ರವಾಸ ಮಾಡುವ ಬಗೆ ಕಂಡು ಹಿಡಿದರು. ಆದರೂ ಕೆಲವರು ಈ ಖನಿಜ ತೈಲವನ್ನು ನಂಬದೆ ಕಟ್ಟಿಗೆ ಸುಟ್ಟು ಉಗಿಯಿಂದ ನಡೆಯುವ ಕಾರುಗಳಲ್ಲಿ ಕುಳಿತು ಪ್ರವಾಸ ಮಾಡಿದರು.




# ಆಟೋಮೋಬಾಯಿಲ್!




ಇನ್ನೂ ಕೆಲವರಿಗಂತೂ ಕುದುರೆ ಜಟಕಾನೇ ಸರಿ ಎನ್ನಿಸಿತು.
ಏಕೆಂದರೆ ಈ ಪೆಟ್ರೋಲ್ ಕಾರುಗಳು ದಾರಿಯಲ್ಲಿ ಕೆಲಸ ಮಾಡದಿದ್ದರೆ
ಹೇಗೆ ಎಂಬ ವಿಚಾರವು ಅವರ ತಲೆಯಲ್ಲಿತ್ತು.

ಆದರೆ ಈ ಇಂಜಿನ್ನುಗಳಲ್ಲಿ ಸುಧಾರಣೆಯಾದಂತೆ ಜನರು ಅವುಗಳನ್ನು ನಂಬತೊಡಗಿದರು. ಜನರು ಕಾರುಗಳಲ್ಲಿ ಕುಳಿತು ಪ್ರವಾಸ ಮಾಡತೊಡಗಿದರು. ಎಲ್ಲರಿಗೂ ಈ ವಾಹನ ಸೇರತೊಡಗಿತು.






ಖನಿಜತೈಲುಗಳ ಮೇಲೆ ನಡೆಯುವ ಕಾರು ಇಂಜಿನ್ನುಗಳ ತೂಕ ಕಡಿಮೆ ಮತ್ತು ಆ ತೂಕದ ಎಷ್ಟೋ ಪಟ್ಟು ಭಾರವನ್ನು ಒಯ್ಯುವದರಿಂದ ಆಕಾಶದಲ್ಲಿ ಹಾರುವ ಕನಸು ನನಸಾಗತೊಡಗಿತು. ಕೆಲವು ಸಲ ಪಕ್ಷಿಗಳಂತೆ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಲು ಕೂಡ ಪ್ರಯತ್ನಸಿದರು. ಅದು ಕೂಡ ಕೆಲಸ ಮಾಡಲಿಲ್ಲ. ಇದೇ ರೀತಿಯಲ್ಲಿ ಸಾಕಷ್ಟು ಪ್ರಯೋಗಗಳನ್ನು ಮತ್ತು ಪ್ರಯತ್ನ ಮಾಡಿದಾಗ ಅವರಿಗೆ ಆಕಾಶದಲ್ಲಿ ಹಾರಲು ಯಶಸ್ಸು ದೊರೆಯಿತು.

ಇಷ್ಟಾದರೂ ಕೆಲವರಿಗೆ ಆಕಾಶದಲ್ಲಿ ಹಕ್ಕಿಗಳಂತೆ ಹಾರುತ್ತ ಹೋಗುವ ಹುಚ್ಚು ಬಿಟ್ಟಿರಲಿಲ್ಲ. ಅದಕ್ಕಾಗಿ ಅನಿಲ ತುಂಬಿದ ಹಗುರಾದ ಬಲೂನುಗಳಲ್ಲಿ ಪ್ರವಾಸ ಮಾಡಿದರು. ಆದರೆ ಈ ಬಲೂನುಗಳು ಎಲ್ಲಿ ಇಳಿಯುತ್ತವೆ ಎಂಬುದರ ಬಗ್ಗೆ ಗೊತ್ತು ಇರದ ಮೂಲಕ ಈ ಬಲೂನುಗಳ ಪ್ರವಾಸವನ್ನು ನಿಲ್ಲಿಸಬೇಕಾಯಿತು.









ಝೂಮ್...


ಅವರು ಆಕಾಶದಲ್ಲಿ ಹಾರತೊಡಗಿದರು.



ಜನರು ಆಕಾಶದಲ್ಲಿ ಹಾರತೊಡಗಿದರು. ವಿಮಾನಗಳಲ್ಲಿ ಕುಳಿತು ಪ್ರವಾಸ ಮಾಡತೊಡಗಿದರು.

ನೋಡನೋಡುವದರಲ್ಲಿ ವಿಮಾನಗಳ ವೇಗವು ರೈಲು, ಕಾರು ಹಡಗುಗಳಿಗಿಂತ ಎಷ್ಟೋ ಪಟ್ಟು ಹೆಚ್ಚು ಇತ್ತು. ದೇಶದ ಒಂದು ತುದಿಯಲ್ಲಿಯ ಹಣ್ಣುಗಳನ್ನು ಮುಂಜಾನೆ ವಿಮಾನದಲ್ಲಿಟ್ಟು ಪಯಣ ಮಾಡಿದರೆ ಮತ್ತೊಂದು ತುದಿಯಲ್ಲಿರುವ ನಗರದಲ್ಲಿಯ ಜನರು ತಿನ್ನಲು ಸಾಧ್ಯವಾಗತೊಡಗಿತು.





ಆದಿಮಾನವನು ಪ್ರಾಣಿಗಳನ್ನು ಪಳಗಿಸಿ ಪ್ರವಾಸ ಮಾಡುತ್ತ ಭಾರವನ್ನು ಹೊತ್ತು ಹೋಗುವ ದಿನಗಳಿಂದ ಮೊದಲ್ಗೊಂಡು ಅವನ ಆಯುಷ್ಯದಲ್ಲಿಯೇ ಮಾಡಿದಷ್ಟು ಪ್ರವಾಸವನ್ನು ಈಗಿನ ಮಾನವನು ಒಂದೇ ದಿನದಲ್ಲಿ ಮಾಡುತ್ತಾನೆ.



ಇದೇ ರೀತಿಯ ಪ್ರವಾಸ ಸೌಕರ್ಯಗಳು ಸುಧಾರಣೆ ಯಾಗುತ್ತ ಹೋದರೆ ಕೆಲವೇ ವರುಷಗಳಲ್ಲಿ ನೀವು ಆಕಾಶಯಾನಗಳಲ್ಲಿ ಪ್ರವಾಸ ಮಾಡುತ್ತ ಸೌರಮಾಲಿಕೆಯಲ್ಲಿ ಗ್ರಹ-ನಕ್ಷತ್ರಗಳನ್ನು ಕೂಡ ಮುಟ್ಟಬಹುದು.




ತಾವೆಲ್ಲರು ಸ್ಪೇಸ ಶಟಲ್ ದಲ್ಲಿ ಪ್ರವಾಸ
ಮಾಡಬಯಸುವ ಪಯಣಿಗರು...